# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ರಾಮದುರ್ಗ ಜಿ; ಬೆಳಗಾವಿ

ಸಂ. ಪಿ3/ಅನುದಾನರಹಿತ ಹೊ.ಕಿ.ಪ್ರಾ.ಶಾ/ಪ್ರಮಾ/ಕುರಿತು/01/2017-18 ದಿನಾಂಕ; 26/10/2017

## ಪ್ರಥಮ ಮಾನ್ಯತೆ

ವಿಷಯ; 2017-18 ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಶಾಲೆಯನ್ನು ಪ್ರಾರಂಭಿಸಲು ನೊಂದಣಿ ಅನುಮತಿ ನೀಡಲಾದ ಕಿರಿಯ ಪ್ರಾಥಮಿಕ ಶಾಲೆಗಳಿಗೆ ಪ್ರಥಮ ಮಾನ್ಯತೆ ನೀಡುವ ಕುರಿತು.

ಉಲ್ಲೇಖ ; 1. ಮಾನ್ಯ ಉಪನಿರ್ದೇಶಕರು ಸಾ.ಶಿ.ಇ. ಬೆಳಗಾವಿ ರವರ ಪತ್ರ ಸಂಖ್ಯೆ :ಪಿಜಿ2/ಹೊ.ಖಾ.ಪ್ರಾ.ಶಾ./ಬಿ.ಆರ್.ಡಿ.ಎಸ್/10/ಆಂಗ್ಲ/2017-18 ದಿನಾಂಕ: 30/03/2017

2. ಅಧ್ಯಕ್ಷರು, ಸಿ.ಎಮ್.ಪಂಚಕಟ್ಟಿಮಠ ಎಜ್ಯುಕೇಶನಲ್ ಟ್ರಸ್ಟ್ ರಾಮದುರ್ಗ ತಾ: ರಾಮದುರ್ಗ ಇವರ ಪತ್ರ ದಿನಾಂಕ; 20/09/2017

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಅನುದಾನರಹಿತವಾಗಿ ಹೊಸದಾಗಿ ಕಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಇಲಾಖಾ ಅನುಮತಿ (ಪ್ರಥಮ ಮಾನ್ಯತೆ) ನೀಡಲು ಕೋರಿ ಉಲ್ಲೇಖ (2) ರಂತೆ ಸಲ್ಲಿಸಿದ ಪ್ರಸ್ತಾವಣೆಯನ್ನು ಪರಿಶೀಲಿಸಿ, ಕರ್ನಾಟಕ ಶಿಕ್ಷಣ ಅಧಿನಿಯಮ 1983 ಸೆಕ್ಷನ್ 30 ಮತ್ತು 31 ರನ್ವಯ ಸದರಿ ಅಧ್ಯಕ್ಷರು, ಸಿ.ಎಮ್. ಪಂಚಕಟ್ಟಿಮಠ ಎಜ್ಯುಕೇಶನಲ್ ಟ್ರಸ್ಟ್ ರಾಮದುರ್ಗ ತಾ: ರಾಮದುರ್ಗ ಜಿ: ಬೆಳಗಾವಿ ಈ ಆಡಳಿತ ಮಂಡಳಿಯ ವತಿಯಿಂದ ಪಂಚಕಟ್ಟಿಮಠ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ರಾಮದುರ್ಗ ತಾ: ರಾಮದುರ್ಗ ಈ ಶಾಲೆಯನ್ನು ಪ್ರಾರಂಭಿಸಲು ಉಲ್ಲೇಖ (1) ರಂತೆ ನೀಡಲಾದ ನೊಂದಣಿ ಆದೇಶದ ಮೇರೆಗೆ 2017-18 ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಈ ಕೆಳಗಿನಂತೆ ಇಲಾಖಾ ಅನುಮತಿ (ಪ್ರಥಮ ಮಾನ್ಯತೆ) ನೀಡಲಾಗಿದೆ.

| ಅ.ನಂ | ಕಿರಿಯ ಪ್ರಾಥಮಿಕ ಶಾಲೆಯ ಹೆಸರು | ಮಾಧ್ಯಮ | ತರಗತಿ | ವಿಭಾಗ | (ಪ್ರಥಮ ಮಾನ್ಯತೆ) ನೀಡಿದ ವರ್ಷ |
|---|---|---|---|---|---|
| 1 | 2 | 3 | 4 | | 5 |
| 1 | ಪಂಚಕಟ್ಟಿಮಠ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ರಾಮದುರ್ಗ ತಾ: ರಾಮದುರ್ಗ. | ಆಂಗ್ಲ ಮಾಧ್ಯಮ | 1 ನೇ ತರಗತಿ | 01 | 2017-18 |

ಷರತ್ತುಗಳು:-

1. ಶಾಲೆಯನ್ನು ಶಾಶ್ವತ ಅನುದಾನ ರಹಿತವಾಗಿರತಕ್ಕದ್ದು.
2. ನಿಗಧಿತ ಸ್ಥಿರ ನಿಧಿ ಇರತಕ್ಕದ್ದು.
3. ಹೆಚ್ಚಿನ ವರ್ಗ ಹಾಗೂ ವಿಭಾಗಗಳನ್ನು ಇಲಾಖಾ ಅನುಮತಿ ಇಲ್ಲದೆ ತೆರೆಯತಕ್ಕದ್ದಲ್ಲ.
4. ಇಲಾಖೆಯಿಂದ ನಿಗದಿಪಡಿಸಿದ ಪಠ್ಯ ಪುಸ್ತಕಗಳನ್ನು ಉಪಯೋಗಿಸತಕ್ಕದ್ದು.
5. ಮಾಧ್ಯಮಕ್ಕೆ ತಕ್ಕ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ನೇಮಿಸತಕ್ಕದ್ದು.
6. ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಹೊದಿರತಕ್ಕದ್ದು.
7. ಸರಕಾರ ನಿಗದಿಪಡಿಸಿದಂತೆ ಶಾಲಾ ಶುಲ್ಕ ವಸೂಲಿ ಮಾಡತಕ್ಕದ್ದು.
8. ಶಾಲೆಯಲ್ಲಿ ಅಗ್ನಿ ನಂದಕ ಅಳವಡಿಸವುದು.
9. ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ಪಡೆದಿರತಕ್ಕದ್ದು. (ಸಂಬಂಧಿಸಿದ ಪ್ರಾಧಿಕಾರದಿಂದ)
10. ಶಾಲೆಗೆ ಸ್ವಂತ ಕಟ್ಟಡ ಹೊಂದಿರತಕ್ಕದ್ದು. ಇಲ್ಲವೇ ಬಾಡಿಗೆ ಕಟ್ಟಡವಾದಲ್ಲಿ ಬಾಡಿಗೆ ಕರಾರು ಪತ್ರ ಕಚೇರಿ ಸಲ್ಲಿಸುವುದು.
11. ಶಾಲಾ ಸಿಬ್ಬಂದಿಗಳಿಗ ಸೇವಾ ಭದ್ರತೆ ಒದಗಿಸುವುದು.
12. ಆಡಳಿತ ಮಂಡಳಿಯ ಸದಸ್ಯರ ಯಾದಿ ಹೊಂದಿರತಕ್ಕದು (ಪ್ರಸ್ತುತ ವರ್ಷದ ನವೀಕರಣದೊಂದಿಗೆ)
13. ಕಡ್ಡಾಯವಾಗಿ ಶಾಲಾ ಶಿಕ್ಷಕರ ಸೇವಾ ಪುಸ್ತಕ ತೆರೆದಿರತಕ್ಕದ್ದು.
14. ಆಡಳಿತ ಮಂಡಳಿಯ ಲೆಕ್ಕ ಪರೀಶೋಧನಾ ವರದಿ.
15. ಸರಕಾರದ ಆದೇಶ ಸಂ: ಇಡಿ 46 ಎಸ್.ಇ.ಪಿ. 2006 ಬೆಂಗಳೂರು ದಿನಾಂಕ: 22/11/2006 ರಂತೆ ದಾಖಲಾತಿಯಲ್ಲಿ ಮೀಸಲಾತಿ ನಿಯಮವನ್ನು ಪಾಲಿಸಿರಬೇಕು.
16. ಶಾಲೆಯಲ್ಲಿ ಮಕ್ಕಳಿಗೆ ಶುದ್ಧವಾದ ಕುಡಿಯುವ ನೀರು, ಪಾಠೋಪಕರಣ, ಪಿಠೋಪಕರಣ, ಆಟದ ಮೈದಾನ, ಹೊಂದಿರತಕ್ಕದ್ದು.
17. ಶಾಲೆಯಲ್ಲಿಯ ಮಕ್ಕಳ ಸುರಕ್ಷತೆ ಬಗ್ಗೆ ನಿಗಾವಹಿಸುವುದು. ಹಾಗೂ ಮಕ್ಕಳ ಚಲನ ವಲನದ ಬಗ್ಗೆ ಕಡ್ಡಾಯವಾಗಿ ವಹಿಯಲ್ಲಿ ದಾಖಲೆ ಇಡುವುದು. ಮತ್ತು ಶಾಲೆಯಲ್ಲಿ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸತಕ್ಕದ್ದು.
18. 2017-18 ನೇಸಾಲಿನಲ್ಲಿ 1 ನೇ ತರಗತಿ ಹಾಗೂ 2018-19 ನೇ ಸಾಲಿನಲ್ಲಿ 2 ನೇ ತರಗತಿಯಂತೆ ಸಾಮಾನ್ಯ ಬೆಳವಣಿಗೆಯಲ್ಲಿ ಪ್ರತಿ ವರ್ಷ ಒಂದೊಂದು ವರ್ಗಗಳನ್ನು ಪ್ರಾರಂಭಿಸುವದು.
19. ಶಾಲೆಯಲ್ಲಿ ದಾಖಲಾದ ಮಕ್ಕಳ ದಾಖಲಾತಿ/ಹಾಜರಾತಿ ವಹಿ ಇಡುವುದು

ಕ್ಷೇತ್ರ ಶಿಕ್ಷಣಾಧಿಕಾರಿಗಳು
ರಾಮದುರ್ಗ ಜಿ: ಬೆಳಗಾವಿ
ಕ್ಷೇ.ಶಿ.ಅ. ರಾಮದುರ್ಗ.

ಗೆ.

1. ಅಧ್ಯಕ್ಷರು, ಸಿ.ಎಮ್.ಪಂಚಕಟ್ಟಿಮಠ ಎಜ್ಯುಕೇಶನಲ್ ಟ್ರಸ್ಟ್ ರಾಮದುರ್ಗ ತಾ: ರಾಮದುರ್ಗ ಜಿ: ಬೆಳಗಾವಿ ರವರಿಗೆ.
2. ಕಚೇರಿ ಪ್ರತಿ.

CHAIRMAN
C.M. PANCHAKATTIMATH. EDUCATIONAL TRUST.
RAMDURG 591123

CHAIRMAN
M. PANCHAKATTIMATH ...

C.M. PANCHAKATTIMATH. EDUCATIONAL TRUST RAMDURG 591123

Scanned with CamScanner

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ರಾಮದುರ್ಗ ಜಿ; ಬೆಳಗಾವಿ

ಸಂ. ಪಿ3/ಪ್ರಾಶಾಶಿ/ಅ.ರ.ಶಾ/ಮಾ.ನ.ಕು./ /2018-19 /120 ದಿನಾಂಕ; 16 /11/2018

## -: ಮಾನ್ಯತೆ ನವೀಕರಣ :-

ವಿಷಯ; ಖಾಸಗಿ ಅನುದಾನ ರಹಿತ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಮಾನ್ಯತೆ ನವೀಕರಣ ನೀಡುವ ಕುರಿತು.

ಉಲ್ಲೇಖ ; 1. ಅಧ್ಯಕ್ಷರು/ಕಾರ್ಯದರ್ಶಿಗಳು/ಪ್ರಧಾನಗುರುಗಳು, ಸಿ. ಎಮ್. ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ತಾ: ರಾಮದುರ್ಗ ಇವರ ಪತ್ರ ದಿ; 28/08/2018

*****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯತೆ ನವೀಕರಣ ನೀಡುವ ಕುರಿತು ಉಲ್ಲೇಖಿತ ಪತ್ರದಂತೆ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸಿ. ಎಮ್. ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ತಾ: ರಾಮದುರ್ಗ ಈ ಆಡಳಿತ ಮಂಡಳಿಯು ನಡೆಸುತ್ತಿರುವ ಈ ಕೆಳಗಿನ ಶಾಲೆಗೆ ಸನ್ 2018-19 ನೇ ಸಾಲಿಗೆ ಷರತ್ತುಗಳಿಗೆ ಒಳಪಡಿಸಿ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯತೆ ನವೀಕರಣ ನೀಡಲಾಗಿದೆ.

| ಅ. ನಂ | ಕಿರಿಯ/ಹಿರಿಯ ಪ್ರಾಥಮಿಕ ಶಾಲೆಯ ಹೆಸರು | ಮಾಧ್ಯಮ | ತರಗತಿ | (ಮಾನ್ಯತೆ ನವೀಕರಣ) ನೀಡಿದ ವರ್ಷ |
|---|---|---|---|---|
| 1 | 2 | 3 | 4 | 5 |
| 1 | ಪಂಚಕಟ್ಟಿಮಠ ಕಿರಿಯ ಪ್ರಾಥಮಿಕ ಶಾಲೆ ರಾಮದುರ್ಗ ತಾ: ರಾಮದುರ್ಗ | ಆಂಗ್ಲ ಮಾಧ್ಯಮ | 1 ರಿಂದ 2 ನೇ ತರಗತಿ | 2018-19 |

ಷರತ್ತುಗಳು:-

1. ಶಾಲೆಯು ಶಾಶ್ವತ ಅನುದಾನ ರಹಿತವಾಗಿರತಕ್ಕದ್ದು.
2. ಅನುದಾನ ಸಂಹಿತೆಯ ನಿಯಮಗಳು ಅನುಗುಣವಾಗಿ ಸುಸಜ್ಜಿತವಾದ ಕಟ್ಟಡ, ಆಟದ ಮೈದಾನ, ಪೀಠೋಪಕರಣ ಮತ್ತು ಪಾಠೋಪಕರಣಗಳನ್ನು ಆಡಳಿತ ಮಂಡಳಿಯು ಪೂರೈಸತಕ್ಕದ್ದು.
3. ಹೆಚ್ಚಿನ ವರ್ಗಗಳನ್ನು ಹಾಗೂ ವಿಭಾಗಗಳನ್ನು ಇಲಾಖೆಯ ಪೂರ್ವಾನುಮತಿ ಇಲ್ಲದೇ ತೆರೆಯತಕ್ಕದ್ದಲ್ಲ.
4. ನಿಗದಿತ ಸ್ಥಿರ ನಿಧಿ ಇರತಕ್ಕದ್ದು.
5. ಪ್ರತಿ ವರ್ಷ ಕಡ್ಡಾಯವಾಗಿ ಮಾನ್ಯತೆ ನವೀಕರಣ ಪಡೆಯತಕ್ಕದ್ದು.
6. ಪ್ರತಿ ವರ್ಷ ಇಲಾಖಾ ಅಧಿಕಾರಿಗಳಿಂದ ತಪಾಸಣೆ ಮಾಡಿಸತಕ್ಕದ್ದು.
7. ಶಾಲಾ ಶುಲ್ಕ ವಸೂಲಾತಿಗೆ ತಪ್ಪದೇ ಇಲಾಖಾ ಅನುಮತಿ ಪಡೆಯುವುದು.
8. ಅರ್ಹ ಶಿಕ್ಷಕರನ್ನು ನೇಮಿಸತಕ್ಕದ್ದು ಹಾಗೂ ಸೇವಾ ಪುಸ್ತಕ ವಿವರ ನಿರ್ವಹಿಸುವುದು.
9. ಶಿಕ್ಷಕರ/ಸಿಬ್ಬಂದಿಯವರ ವೇತನವನ್ನು ಬ್ಯಾಂಕ ಮೂಲಕ ನೀಡುವುದು.
10. ಗಂಡು/ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಮತ್ತು ಮೂತ್ರಾಲಯಗಳನ್ನು ಒದಗಿಸುವುದು.
11. ಅಧಿಕೃತ ಇಂಜಿನಿಯರಗಳಿಂದ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.
12. ಶಾಲೆಯಲ್ಲಿ ಸರಕಾರಿ ಆದೇಶ ಸಂ: ಇಡಿ 46 ಎಸ್.ಇ.ಪಿ. 2006 ಬೆಂಗಳೂರು ದಿ: 22/11/2006 ದಾಖಲಾತಿಯಲ್ಲಿ ಮೀಸಲಾತಿ ನಿಯಮ ಅನುಸರಿಸುತ್ತಿರುವ ಬಗ್ಗೆ ಪ್ರತಿ ವರ್ಷ ನಿಯಮಾನುಸಾರ ಆರ್.ಟಿ.ಇ. 2009 ರನ್ವಯ ಹಾಗೂ ಶಿಕ್ಷಣ ಹಕ್ಕು ಕಾಯ್ದೆ 2009 ಹಾಗೂ ನಿಯಮಗಳು-2012 ರನ್ವಯ ದಾಖಲಾತಿ ಮಾಹಿತಿಯನ್ನು ಪ್ರತಿ ವರ್ಷದ ಜುಲೈ 10 ರೊಳಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.
13. ಶಾಲೆಯು ಪ್ರತಿ ವರ್ಷ ಆಯಾ ಸಾಲಿನ ಲೆಕ್ಕ ಪತ್ರಗಳನ್ನು (ಆಡಿಟ್) ಪ್ರಾಧಿಕಾರದಿಂದ ಪರಿಶೀಲಿಸಿ ಕೊಡತಕ್ಕದ್ದು.
14. ಸರ್ಕಾರದ ಆದೇಶ ಸಂ: 02/02/2000 ರ ಹಾಗೂ ಆರ್.ಟಿ.ಇ. 2009 ರನ್ವಯ ನಿಗದಿ ಪಡಿಸಿದಂತೆ ಶಾಲೆಯಲ್ಲಿ ಮಕ್ಕಳ ಸಂಖ್ಯಾ ಬಲವನ್ನು ಕಾಯ್ದುಕೊಳ್ಳುವುದು.
15. ಆಟದ ಮೈದಾನ ಹೊಂದಿದ ಬಗ್ಗೆ ಕಂದಾಯ ಇಲಾಖೆಯಿಂದ ಪಡೆದ ಅಧಿಕೃತ ಪ್ರಮಾಣ ಪತ್ರ ಸಲ್ಲಿಸುವುದು.
16. ಆಡಳಿತ ಮಂಡಳಿಯಿಂದ ಶಾಲಾ ಆಸ್ತಿ ಪಹಣಿ ಪತ್ರಿಕೆ ಸಲ್ಲಿಸುವುದು.
17. ಶಾಲೆಯಲ್ಲಿ ಅಗ್ನಿ ನಂದಕ ಹಾಗೂ ಸಿ ಸಿ ಕ್ಯಾಮರಾ ಯಂತ್ರವನ್ನು ಅಳವಡಿಸವುದು.
18. ಸೇವಾ ಭದ್ರತೆ, ರಜಾ ಸೌಲಭ್ಯ, ಶಿಕ್ಷಕರ ಪ್ರತ್ಯೇಕ ಬ್ಯಾಂಕ ಖಾತೆಯ ಮೂಲಕ ಕನಿಷ್ಠ ವೇತನ (ರೂ.13600/- ನೀಡುವುದು)

ಸೂಚನೆ: ಈ ಮೇಲಿನ ಎಲ್ಲ ಷರತ್ತುಗಳನ್ನು ಪೂರೈಸದೇ ಹೋದಲ್ಲಿ ಹಾಗೂ ಸರ್ಕಾರದ ಆದೇಶಗಳನ್ನು /ನಿಯಮಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ ಹಾಗೂ ಶಾಲೆಯ ಮೂಲಭೂತ ಸೌಕರ್ಯ ಹಾಗೂ ಸೇವಾ ಭದ್ರತೆ ಕುರಿತು 2015-16 & 2016-17 & 2017-18 ನೇ ಸಾಲಿನ ಮಾನ್ಯತೆ ನವೀಕರಣ ಆದೇಶದಲ್ಲಿಯ ಷರತ್ತುಗಳನ್ನು ಹಾಗೂ ಈ ಮೇಲಿನ ಎಲ್ಲ ಷರತ್ತುಗಳನ್ನು ಪಾಲಿಸಿ ಕಡ್ಡಾಯವಾಗಿ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ಆದೇಶ ಹೊಡಿಸಿದ ದಿನಾಂಕದಿಂದ 3 ತಿಂಗಳ ಒಳಗಾಗಿ ಈ ಕಚೇರಿಗೆ ಸಲ್ಲಿಸುವುದು ಇಲ್ಲದಿದ್ದಲ್ಲಿ ಸದರಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ರಾಮದುರ್ಗ ಜಿ: ಬೆಳಗಾವಿ

ಗೆ.

1. ಅಧ್ಯಕ್ಷರು/ಕಾರ್ಯದರ್ಶಿಗಳು, ಸಿ. ಎಮ್. ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ತಾ: ರಾಮದುರ್ಗ ರವರಿಗೆ.
2. ಕಚೇರಿ ಪ್ರತಿ.

CHAIRMAN
C. M. PANCHAKATTIMATH. EDUCATIONAL TRUST.
RAMDURG - 591123

Scanned with CamScanner

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ರಾಮದುರ್ಗ ಜಿ; ಬೆಳಗಾವಿ

ಸಂ: ಪಿ3/ಪ್ರಾಶಾಶಿ/ಅ.ರ.ಶಾ/ಮಾ.ನ.ಕು./ /2019-20 ದಿನಾಂಕ: 25/11/2019

## -: ಮಾನ್ಯತೆ ನವೀಕರಣ :-

ವಿಷಯ; ವಿಷಯ: 2019-20 ನೇ ಸಾಲಿಗೆ ಖಾಸಗಿ ಅನುದಾನ ರಹಿತ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಮಾನ್ಯತೆ ನವೀಕರಣ ನೀಡುವ ಕುರಿತು.

ಉಲ್ಲೇಖ : 1. ಅಧ್ಯಕ್ಷರು/ಕಾರ್ಯದರ್ಶಿಗಳು/ಪ್ರಧಾನಗುರುಗಳು, ಸಿ. ಎಮ್. ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ತಾ: ರಾಮದುರ್ಗ ಇವರ ಪತ್ರ ದಿ: 28/08/2018

*****

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯತೆ ನವೀಕರಣ ನೀಡುವ ಕುರಿತು ಉಲ್ಲೇಖಿತ ಪತ್ರದಂತೆ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸಿ. ಎಮ್. ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ತಾ: ರಾಮದುರ್ಗ ಈ ಆಡಳಿತ ಮಂಡಳಿಯು ನಡೆಸುತ್ತಿರುವ ಈ ಕೆಳಗಿನ ಶಾಲೆಗೆ ಸನ್ 2019-20 ನೇ ಸಾಲಿಗೆ ಷರತ್ತುಗಳಿಗೆ ಒಳಪಡಿಸಿ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯತೆ ನವೀಕರಣ ನೀಡಲಾಗಿದೆ.

| ಅ. ನಂ | ಕಿರಿಯ/ಹಿರಿಯ ಪ್ರಾಥಮಿಕ ಶಾಲೆಯ ಹೆಸರು | ಮಾಧ್ಯಮ | ತರಗತಿ | (ಮಾನ್ಯತೆ ನವೀಕರಣ) ನೀಡಿದ ವರ್ಷ |
|---|---|---|---|---|
| 1 | 2 | 3 | 4 | 5 |
| 1 | ಪಂಚಕಟ್ಟಿಮಠ ಕಿರಿಯ ಪ್ರಾಥಮಿಕ ಶಾಲೆ ರಾಮದುರ್ಗ ತಾ: ರಾಮದುರ್ಗ | ಆಂಗ್ಲ ಮಾಧ್ಯಮ | 1 ರಿಂದ 3 ನೇ ತರಗತಿ | 2019-20 |

**ಷರತ್ತುಗಳು:-**

1. ಶಾಲೆಯು ಶಾಶ್ವತ ಅನುದಾನ ರಹಿತವಾಗಿರತಕ್ಕದ್ದು.
2. ಅನುದಾನ ಸಂಹಿತೆಯ ನಿಯಮಗಳು ಅನುಗುಣವಾಗಿ ಸುಸಜ್ಜಿತವಾದ ಕಟ್ಟಡ, ಆಟದ ಮೈದಾನ, ಪೀಠೋಪಕರಣ ಮತ್ತು ಪಾಠೋಪಕರಣಗಳನ್ನು ಆಡಳಿತ ಮಂಡಳಿಯು ಪೂರೈಸತಕ್ಕದ್ದು.
3. ಹೆಚ್ಚಿನ ವರ್ಗಗಳನ್ನು ಹಾಗೂ ವಿಭಾಗಗಳನ್ನು ಇಲಾಖೆಯ ಪೂರ್ವಾನುಮತಿ ಇಲ್ಲದೇ ತೆರೆಯತಕ್ಕದ್ದಲ್ಲ.
4. ನಿಗಧಿತ ಸ್ಥಿರ ನಿಧಿ ಇರತಕ್ಕದ್ದು.
5. ಪ್ರತಿ ವರ್ಷ ಕಡ್ಡಾಯವಾಗಿ ಮಾನ್ಯತೆ ನವೀಕರಣ ಪಡೆಯತಕ್ಕದ್ದು.
6. ಪ್ರತಿ ವರ್ಷ ಇಲಾಖಾ ಅಧಿಕಾರಿಗಳಿಂದ ತಪಾಸಣೆ ಮಾಡಿಸತಕ್ಕದ್ದು.
7. ಶಾಲಾ ಶುಲ್ಕ ವಸೂಲಾತಿಗೆ ತಪ್ಪದೇ ಇಲಾಖಾ ಅನುಮತಿ ಪಡೆಯುವುದು.
8. ಅರ್ಹ ಶಿಕ್ಷಕರನ್ನು ನೇಮಿಸತಕ್ಕದ್ದು ಹಾಗೂ ಸೇವಾ ಪುಸ್ತಕ ವಿವರ ನಿರ್ವಹಿಸುವುದು.
9. ಶಿಕ್ಷಕರ/ಸಿಬ್ಬಂದಿಯವರ ವೇತನವನ್ನು ಬ್ಯಾಂಕ ಮೂಲಕ ನೀಡುವುದು.
10. ಗಂಡು/ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಮತ್ತು ಮೂತ್ರಾಲಯಗಳನ್ನು ಒದಗಿಸುವುದು.
11. ಅಧಿಕೃತ ಇಂಜಿನಿಯರಗಳಿಂದ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.
12. ಶಾಲೆಯಲ್ಲಿ ಸರಕಾರಿ ಆದೇಶ ಸಂ: ಇಡಿ 46 ಎಸ್.ಇ.ಪಿ. 2006 ಬೆಂಗಳೂರು ದಿ: 22/11/2006 ದಾಖಲಾತಿಯಲ್ಲಿ ಮೀಸಲಾತಿ ನಿಯಮ ಅನುಸರಿಸುತ್ತಿರುವ ಬಗ್ಗೆ ಪ್ರತಿ ವರ್ಷ ನಿಯಮಾನುಸಾರ ಆರ್.ಟಿ.ಇ. 2009 ರನ್ವಯ ಹಾಗೂ ಶಿಕ್ಷಣ ಹಕ್ಕು ಕಾಯ್ದೆ 2009 ಹಾಗೂ ನಿಯಮಗಳು-2012 ರನ್ವಯ ದಾಖಲಾತಿ ಮಾಹಿತಿಯನ್ನು ಪ್ರತಿ ವರ್ಷದ ಜುಲೈ 10 ರೊಳಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು.
13. ಶಾಲೆಯು ಪ್ರತಿ ವರ್ಷ ಆಯಾ ಸಾಲಿನ ಲೆಕ್ಕ ಪತ್ರಗಳನ್ನು (ಆಡಿಟ್) ಪ್ರಾಧಿಕಾರದಿಂದ ಪರಿಶೀಲಿಸಿ ಕೊಡತಕ್ಕದ್ದು.
14. ಸರ್ಕಾರದ ಆದೇಶ ಸಂ: 02/02/2000 ರ ಹಾಗೂ ಆರ್.ಟಿ.ಇ. 2009 ರನ್ವಯ ನಿಗದಿ ಪಡಿಸಿದಂತೆ ಶಾಲೆಯಲ್ಲಿ ಮಕ್ಕಳ ಸಂಖ್ಯಾ ಬಲವನ್ನು ಕಾಯ್ದುಕೊಳ್ಳುವುದು.
15. ಆಟದ ಮೈದಾನ ಹೊಂದಿದ ಬಗ್ಗೆ ಕಂದಾಯ ಇಲಾಖೆಯಿಂದ ಪಡೆದ ಅಧಿಕೃತ ಪ್ರಮಾಣ ಪತ್ರ ಸಲ್ಲಿಸುವುದು.
16. ಆಡಳಿತ ಮಂಡಳಿಯಿಂದ ಶಾಲಾ ಆಸ್ತಿ ಪಹಣಿ ಪತ್ರಿಕೆ ಸಲ್ಲಿಸುವುದು.
17. ಶಾಲೆಯಲ್ಲಿ ಅಗ್ನಿ ನಂದಕ ಹಾಗೂ ಸಿ ಸಿ ಕ್ಯಾಮರಾ ಯಂತ್ರವನ್ನು ಅಳವಡಿಸುವುದು.
18. ಸೇವಾ ಭದ್ರತೆ, ರಜಾ ಸೌಲಭ್ಯ, ಶಿಕ್ಷಕರ ಪ್ರತ್ಯೇಕ ಬ್ಯಾಂಕ ಖಾತೆಯ ಮೂಲಕ ಕನಿಷ್ಠ ವೇತನ (ರೂ.13600/- ನೀಡುವುದು)

**ಸೂಚನೆ:** ಈ ಮೇಲಿನ ಎಲ್ಲ ಷರತ್ತುಗಳನ್ನು ಪೂರೈಸದೇ ಹೋದಲ್ಲಿ ಹಾಗೂ ಸರ್ಕಾರದ ಆದೇಶಗಳನ್ನು /ನಿಯಮಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ ಹಾಗೂ ಶಾಲೆಯ ಮೂಲಭೂತ ಸೌಕರ್ಯ ಹಾಗೂ ಸೇವಾ ಭದ್ರತೆ ಕುರಿತು 2015-16 & 2016-17 & 2017-18 ನೇ ಸಾಲಿನ ಮಾನ್ಯತೆ ನವೀಕರಣ ಆದೇಶದಲ್ಲಿಯ ಷರತ್ತುಗಳನ್ನು ಹಾಗೂ ಈ ಮೇಲಿನ ಎಲ್ಲ ಷರತ್ತುಗಳನ್ನು ಪಾಲಿಸಿ ಕಡ್ಡಾಯವಾಗಿ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ಆದೇಶ ಹೊಡಿಸಿದ ದಿನಾಂಕದಿಂದ 3 ತಿಂಗಳ ಒಳಗಾಗಿ ಈ ಕಚೇರಿಗೆ ಸಲ್ಲಿಸುವುದು ಇಲ್ಲದಿದ್ದಲ್ಲಿ ಸದರಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ರಾಮದುರ್ಗ ಜಿ: ಬೆಳಗಾವಿ

ಗೆ,

1. ಅಧ್ಯಕ್ಷರು/ಕಾರ್ಯದರ್ಶಿಗಳು, ಸಿ. ಎಮ್. ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ತಾ: ರಾಮದುರ್ಗ ರವರಿಗೆ.
2. ಕಚೇರಿ ಪ್ರತಿ.

Scanned with CamScanner

RAMDURG 591123

# ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ (ದ)

ಸಂಖ್ಯೆ:ಪಿಜಿ2/ಹೊಖಾಪ್ರಾಶಾ/ಬಿ.ಆರ.ಡಿ.ಎಸ್/10/ಆಂಗ್ಲ/2017-18 ದಿನಾಂಕ: 30-03-2017.

## ನಮೂನೆ-2

(ನಿಯಮ 3 ಉಪನಿಯಮ 5 (ಬಿ))

ಸಿ. ಎಮ್ ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ ಈ ಆಡಳಿತ ಮಂಡಳಿಯವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ 1-1995) ಸೆಕ್ಷನ್ 30-31 ರಂತೆ ಈ ದಿನ ದಿನಾಂಕ:30-03-2017 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ರಾಮದುರ್ಗ ಗ್ರಾಮದಲ್ಲಿ ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಜಿ.ಎಸ್.ಸಿ ಸ್ವೀಕೃತಿ ರಶೀದಿ ಸಂಖ್ಯೆ ಹಾಗೂ ದಿನಾಂಕ :<br>ಆನ್ ಲೈನ್ ಅಪ್ಲೀಕೇಶನ್ ನಂಬರ/ ದಿನಾಂಕ | ಇಡಿ099-00003-45740 ದಿನಾಂಕ 07-02-2017<br>303068 ದಿನಾಂಕ;31/01/2017. |
| 2. | ಕ್ರಮ ಸಂಖ್ಯೆ/ಅನುಮತಿ ನೀಡಿದ ವರ್ಷ : | 10/2017-18 |
| 3. | ಪ್ರಾಥಮಿಕ ಶಾಲೆಯ ಹೆಸರು : | ಪಂಚಕಟ್ಟಿಮಠ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ ರಾಮದುರ್ಗ. |
| 4. | ಶಿಕ್ಷಣ ಸಂಸ್ಥೆಯ ವರ್ಗೀಕರಣ : | ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ) |
| 5. | ಅನುಮತಿ ನೀಡಿದ ತರಗತಿ : | 1 ನೇ ತರಗತಿ :2017-18 ನೇ ಸಾಲಿನಲ್ಲಿ.<br>2 ನೇ ತರಗತಿ :2018-19 ನೇ ಸಾಲಿನಲ್ಲಿ.<br>3 ನೇ ತರಗತಿ :2019-20 ನೇ ಸಾಲಿನಲ್ಲಿ.<br>4 ನೇ ತರಗತಿ :2020-21 ನೇ ಸಾಲಿನಲ್ಲಿ.<br>5 ನೇ ತರಗತಿ :2021-22 ನೇ ಸಾಲಿನಲ್ಲಿ. |
| 6. | ಪ್ರಾರಂಭಿಸಬೇಕಾದ ವರ್ಷ : | 2017-18 ನೇ ಸಾಲಿನಿಂದ |
| 7. | ಅನುಮತಿ ನೀಡಿದ ಮಾಧ್ಯಮ : | ಆಂಗ್ಲ ಮಾಧ್ಯಮ |
| 8. | ಶುಲ್ಕ ಪಾವತಿ ಮಾಡಿರುವುದು : | ರೂ. 25,000-00 ಪಾವತಿ ಮಾಡಿರುತ್ತಾರೆ.<br>Corporation Bank, ಬೆಳಗಾವಿ.<br>ಡಿ ಡಿ ಸಂಖ್ಯೆ: 036043 ದಿನಾಂಕ: 31-01-2017 |

ಸದರಿ ಶಿಕ್ಷಣ ಸಂಸ್ಥೆಯ/ಶಾಲೆಯನ್ನು ಕ್ರಮ ಸಂಖ್ಯೆ: 10: ವ್ಯಾಲ್ಯೂಮ ಸಂಖ್ಯೆ 01 ರ ಪುಟ ಸಂಖ್ಯೆ: 10 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು 1997 ರ ನಿಯಮ 3, 4 ಮತ್ತು 5 ಕ್ಕೆ ಒಳಪಟ್ಟಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಮಾಹಿತಿ 2012 ದಿನಾಂಕ: 15-11-2012 ರಂತೆ ಈ ನೋಂದಣಿಯು ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಹಾಗೂ ಸದರಿ ಆದೇಶವಡಿಯಲ್ಲಿ ಕಾಲಕಾಲಕ್ಕೆ ಶಾಲಾ ಶಿಕ್ಷಣ ಪದ್ಧತಿಯ ಬದಲಾವಣೆ ಕುರಿತು ರೂಪಿಸಲಾಗುವ ನಿಯಮಗಳನ್ನು ಪಾಲನೆ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಸಂಸ್ಥೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿರುವ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು..
4. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೇ ನಂಬರ್‌ನಲ್ಲಿ ಮಾತ್ರ ತೆರೆಯತಕ್ಕದ್ದು. ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
7. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
8. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ: 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
9. ಈ ಪ್ರಾಥಮಿಕ ಶಾಲೆ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ:175:ಪಿ.ಎಂ.ಸಿ:95, ದಿನಾಂಕ: 7-9-98 ಮತ್ತು ದಿನಾಂಕ: 29-12-98 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ.
10. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.20-00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
11. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.
12. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
13. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.
14. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36-39 ರಂತೆ ನೋಂದಾಯಿಸಿದ ಎಲ್ಲ ಶಾಲೆಗಳು ರಿಕಗ್ನೇಷನ್ ಹಾಗೂ ಪ್ರಾವಿಜನಲ್ ರಿಕಗ್ನೇಷನ್ ವ್ಯಾಪ್ತಿಗೆ ಬರುವುದು.
15. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
16. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

Scanned with CamScanner

17. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು, ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗಿಯೇ ರದ್ದಾಗುವುದು.

18. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.

19. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುಂತಾದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.

20. ಶಾಲೆಗಳಲ್ಲಿ ಅಗ್ನಿಶಾಮಕ ಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೋಗದ ಬಗ್ಗೆ ತರಬೇತಿ ನೀಡುವದು

21. ಸಿಬಂದಿ ಮಾದರಿ ರಚನೆಯ ಪ್ರಕಾರ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

22. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ: 12-01-2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು, ಶಿಕ್ಷಕರ ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಠ ವೇತನ [ ರೂ 13600/-] ವನ್ನು ಬ್ಯಾಂಕ ಮೂಲಕ ಪಾವತಿಸತಕದ್ದು.

23. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12-01-2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.

24. ನಿಯಮಾನುಸಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದಲ್ಲಿ ಮಾತ್ರ ಶಾಲೆಯನ್ನು ಪ್ರಾರಂಭಿಸತಕ್ಕದ್ದು.

25. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.

26. ಪ್ರಾರಂಬಿಸಲು ಉದ್ದೇಶಿಸಿರುವ ಶಾಲೆಯು ಬಾಡಿಗೆ ಕಟ್ಟಡ ಹೊಂದಿದ್ದಲ್ಲಿ, ಶಾಲೆ ಪ್ರಾರಂಭಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾಲ ಕಾಲಕ್ಕೆ ಪರಿಶೀಲನೆಗೆ ಒಳಪಟ್ಟಿರುತ್ತದೆ.

27. ಆಡಳಿತ ಮಂಡಳಿಯು ಕನಿಷ್ಠ ರೂ. 5 ಲಕ್ಷ ನಗದು ಠೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಶಾಶ್ವತವಾಗಿ ಹೊಂದಿರತಕ್ಕದ್ದು.

28. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.

29. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.



Scanned with CamScanner

30. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.

31. ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.

32. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮಣ] ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.

33. ಈ ಎಲ್ಲಾ ನಿಬಂಧನೆಗಳನ್ನು ಎರಡು ತಿಂಗಳೊಳಗಾಗಿ ಪೂರೈಸಿ ಪ್ರಥಮ ಮಾನ್ಯತೆ ಕುರಿತು ಅರ್ಜಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

34. ಆರ್ ಟಿ ಇ ಕಾಯ್ದೆ ಅಡಿಯಲ್ಲಿ 25% ಪ್ರತಿಶತ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲ ಮಾಡಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

35. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಆಡಳಿತ ಮಂಡಳಿಯವರು ಆದೇಶದಲ್ಲಿ ಕಾಣಿಸಿದ ಎಲ್ಲ ಷರತ್ತುಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

36. ಸರ್ಕಾರದ ಆದೇಶ ಸಂಖ್ಯೆ:ಇಡಿ 359 ಪಿಜಿಸಿ 2015 ದಿ:05-09-2015 ರಂತೆ ಸಂಸ್ಥೆಯ ಕಾರ್ಯದರ್ಶಿ ಹಾಗೂ ಉಪನಿರ್ದೇಶಕರವರ/ಕ್ಷೇತ್ರ ಶಿಕ್ಷಣಾಧಿಕಾರಿಗಳ ಜಂಟಿ ಹೆಸರಿನಲ್ಲಿ ನಿಯಮಾನುಸಾರ ನಿಗದಿಪಡಿಸಿದಂತೆ ಸ್ಥಿರನಿಧಿಯನ್ನು ಶಾಲೆ ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ಇಡತಕ್ಕದ್ದು. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿ ರದ್ದುಪಡಿಸಲಾಗುವುದು.

ಸ್ಥಳ : ಬೆಳಗಾವಿ
ದಿನಾಂಕ : 30-03-2017

(ಎಸ್ ವೈ ಹಳಿಂಗಳಿ)
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಳಗಾವಿ (ದ)

ಗೆ,

1. ಅಧ್ಯಕ್ಷರು/ಕಾರ್ಯದರ್ಶಿಗಳು, ಸಿ ಎಮ್ ಪಂಚಕಟ್ಟಿಮಠ ಎಜ್ಯುಕೇಶನ್ ಟ್ರಸ್ಟ ರಾಮದುರ್ಗ
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಮದುರ್ಗ.
3. ಕಛೇರಿ ಪ್ರತಿ.

CHAIRMAN
...PANCHAKATTIMATH EDUCATIONAL TRUST
RAMDURG-591 123

CHAIRMAN
...PANCHAKATTIMATH, EDUCATIONAL TRUST.
...G-591123



Scanned with CamScanner